International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಆಧುನಿಕ ಕನ್ನಡ ಕಾವ್ಯಗಳಲ್ಲಿ ಸಮಬಾಳು ಪ್ರಜ್ಞೆ

**ಡಾ.ಮುಮ್ತಾಜ್ ಬೇಗಂ. ಗಂಗಾವತಿ**

ಸಹ ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಂಗಾವತಿ, ಜಿ:ಕೊಪ್ಪಳ

ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದು ಕ್ರೈಸ್ತ, ಮುಸಲ್ಮಾನ, ಪಾರಸಿಕರ ಜೈನರುದ್ಯಾನ ಎನ್ನುವ ಕುವೆಂಪು ಅವರ ಸಮಬಾಳು ಪ್ರಜ್ಞೆ ಸಮಾಜದ ಅಭಿವೃದ್ಧಿಯ ಮುನ್ನೋಟವನ್ನು ಹೊಂದಿದೆ. ಗಾಂಧೀಜಿ ಕಂಡ ರಾಮರಾಜ್ಯದ ಪರಿಕಲ್ಪನೆಯಾಗಲಿ, ಸರ್ವ ಧರ್ಮಗಳ ಸಮನ್ವಯತೆಯ ತತ್ವಗಳು ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ.
ಸಾಮಾಜಿಕ ಕೆಳಸ್ತರದ ಜನಸಮುದಾಯವನ್ನು ತುಂಬಾ ಗೌರವದಿಂದ ಕಂಡ ಕವಿಗಳಲ್ಲಿ ಕುವೆಂಪು ಆದ್ಯರಾಗಿದ್ದಾರೆ. ಜನಸಾಮಾನ್ಯನನ್ನು ಶ್ರೀಸಾಮಾನ್ಯನೆಂದು, ನೇಗಿಲು ಊಳುವ ರೈತನನ್ನ ನೇಗಿಲು ಯೋಗಿಯನ್ನಾಗಿಸಿದ್ದು, ಯಂತ್ರದೊಂದಿಗೆ ಕಾರ್ಯ ನಿರ್ವಹಿಸುವ ಎಂಜಿನಿಯರ್‌ಗಳನ್ನು ಯಂತ್ರರ್ಷಿ ಎಂದು ಕುವೆಂಪು ಆ ಕಾಲಕ್ಕೆ ಸ್ಪಂದಿಸಿರುವ ಬಗ್ಗೆ ಆಶ್ಚರ್ಯವನ್ನುಂಟು ಮಾಡುತ್ತದೆ.
ವರ್ಣಾಶ್ರಮ ವಿರೋಧ, ಪುರೋಹಿತಶಾಹಿತ್ವದ ದೌರ್ಜನ್ಯಗಳ ಖಂಡನೆ, ಮನುಷ್ಯತ್ವದ ಸಮಾನತೆಯ ಪರ ನಿಲುವುಗಳನ್ನು ಕನ್ನಡ ಕಾವ್ಯ ಎತ್ತಿಹಿಡಿದಿದೆ. ಕನ್ನಡ ಕಾವ್ಯದಲ್ಲಿ ಕ್ರಿಯಾಶೀಲವಾಗಿರುವ ಮುಖ್ಯ ಪ್ರವೃತ್ತಿಗಳಲ್ಲಿ ಒಂದಾಗಿದ್ದು, ವೈದಿಕ ವಿರೋಧಿ ನಿಲುವು, ಪ್ರಭುತ್ವ ವಿರೋಧಿ ಧೋರಣೆಗಳು ಕಂಡು ಬರುತ್ತವೆ. ಇವು ಕುವೆಂಪು ಅವರಲ್ಲಿ ಪ್ರಕಾಶನಗೊಂಡು ಮುಂದೆ ಅತ್ಯಂತ ಸ್ಪಷ್ಟ ಮತ್ತು ನಿಖರವಾಗಿ ಧ್ವನಿಸುತ್ತವೆ.

ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆ ಕಿಚ್ಚಿಗೆ ಕಣ್ಣೀರ್ ಸುರಿಸು
ಒಟ್ಟಿಗೆ ಬಳುವ ತೆರದಲಿ ಹರಸು (ಕುವೆಂಪು)

ಮನುಷ್ಯನ ಜೀವದಾಯಿತ್ವದ, ಚೈತನ್ಯಶೀಲತೆಯನ್ನು ಸ್ಥಗಿತಗೊಳಿಸುವ ವರ್ಗ, ವರ್ಣ, ಜಾತಿ, ಸಾಂಸ್ಥಿಕ ಧರ್ಮಗಳ ಪ್ರತಿನಿಧಿಗಳಾದ ಗುಡಿ–ಚರ್ಚು–ಮಸೀದಿ–ಬಸದಿಯನ್ನು ನಿರಾಕರಿಸಿ ಜೀವಕಾರುಣ್ಯವನ್ನು ಪ್ರತಿಪಾದಿಸುವ ಮನುಷ್ಯತ್ವದ ಏಕತೆಯನ್ನು ಬಿಂಬಿಸುವ ಅದೇಷ್ಟೋ ಕನ್ನಡ ಕವಿತೆಗಳು ಕಾಲಕಾಲಕ್ಕೆ ಬಂದಿವೆ. ನಿಸರ್ಗ ಮತ್ತು ಮನುಷ್ಯ ನಿರ್ಮಿತಿ ಸಾಂಸ್ಥಿಕ ನೆಲೆಗಳನ್ನು ಮುಖಾಮುಖಿಗೊಳಿಸುತ್ತಲೇ ಮನುಷ್ಯ ನಿರ್ಮಿತಿಗಳಾದ ಧಾರ್ಮಿಕ ರೂಪಗಳನ್ನು ನಿರಾಕರಿಸುತ್ತಾರೆ. ಜಿ.ಎಸ್.ಎಸ್ ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ ಸರ್ವವನ್ನು ಸಮದರ್ಶನದಲ್ಲಿ ಪರಿಭಾವಿಸುವ ಕ್ರಮ ಕನ್ನಡ ಕಾವ್ಯದಲ್ಲಿ ಕಾಣುತ್ತೇವೆ.

ಚೈತ ಶೀವೇತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಳ ಮತಿ ಮತಿಯಲ್ಲಿ
ಕವಿ ಋಷಿ ಸಂತರ ಆದರ್ಶದಲಿ

ಸರ್ವೋದಯವಾಗಲಿ ಸರ್ವರಲಿ ಎನ್ನುವ ಕುವೆಂಪು ಅವರು ಸರ್ವರ ಮತಿ ಮತಿಗಳಲ್ಲಿ ಸರ್ವೋದಯವಾಗಲಿ ಎನ್ನುವ ಸಮಬಾಳ ದರ್ಶನವನ್ನು ಅಭಿವ್ಯಕ್ತಿಸುತ್ತಾರೆ.
‘ಜಡ’ ಮತ್ತು ಚೈತನ್ಯಗಳ ವ್ಯತ್ಯಾಸ ಏಕತೆಯನ್ನು ಅನೇಕ ಕನ್ನಡದ ಕವಿಗಳು ಕಾವ್ಯದ ಚೌಕಟ್ಟಿನಲ್ಲಿ ನಡೆಸುವ ಚರ್ಚೆ ಅರ್ಥಪೂರ್ಣವಾದದ್ದು. ಜಡವೆಂಬುದೆ ಬರಿ ಸುಳ್ಳು; ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ, ಓ ನನ್ನ ಚೇತನ ಆಗು ನೀ ಅನಿಕೇತನ ಇಂಥ ರಚನೆಗಳು ರಸಾನುಭೂತಿ ಪಡೆವ ಆಧ್ಯಾತ್ಮದ ಅನುಭವವೂ, ವರ್ಣನೆಯೂ ಹೌದು, ಜಡ–ಚೇತನ ಎಂಬ ತರತಮ ಸಾಮಾಜಿಕ ವಿರೋಧವು ಹೌದು.
ನವೋದಯ ಕಾವ್ಯಕ್ಕೆ ಪ್ರಧಾನ ಪ್ರೇರಣೆ ಒದಗಿದ್ದು ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತಗೊಂಡಾಗಲೂ ಸಮಕಾಲೀನ ದೇಶಿಯತೆಯನ್ನು ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಶ್ರೀ ಅರವಿಂದ, ಗಾಂಧಿ ಇತ್ಯಾದಿ ವ್ಯಕ್ತಿಗಳ ಚಿಂತನಾಧಾರೆಗಳು ಆಧ್ಯಾತ್ಮಿಕ ತಾತ್ವಿಕ ವಿಚಾರಗಳೂ ಅಂದಿನ ಕಾವ್ಯ ಪರಂಪರೆಗೆ ಹೊಸ ತೇಜಸ್ಸನ್ನು ನೀಡಿದವು. ಆವ ಗುಡಿ ಮಿಗಿಲು ಈ ಭುವನ ದೇವಾಲಯಕ್ಕೆ ಎನ್ನುತ್ತಾ ನಿಸರ್ಗಾರಾಧನೆ ಎತ್ತಿ ಹಿಡಿದವರು ಕುವೆಂಪು.

ಎನ್ನ ಪಾಡೆನಗಿರಲಿ ಅದರ ಹಾಡನಷ್ಟೇ ನೀಡುವೆ ರಸಿಕ ನಿನಗೆ ಎನ್ನುವ ಬೇಂದ್ರೆಯವರು, 'ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ, ಹೊಸವಾಗಿ, ರಸವಾಗಿ ಹರಿಯುತಿದೆ' ಎನ್ನುವಲ್ಲಿ ಬೇಂದ್ರೆಯವರ ಒಲವು ನಿಲುವುಗಳನ್ನು ಭಕ್ತಿ–ಅನುಭಾವ–ಆಧ್ಯಾತ್ಮದೆಡೆಗಿನ ಕಾವ್ಯ ನಡಿಗೆಯನ್ನು ಕಾಣುತ್ತೇವೆ. ಬೇಂದ್ರೆಯವರು ದೇಶಿಯತೆಯ ಪ್ರಜ್ಞೆಯ ನೆಲೆಯಲ್ಲಿ ಇವರ ಕಾವ್ಯ ಪಯಣ ಸುದೀರ್ಘವಾಗಿ ಸಾಗಿದೆ. ಬೇಂದ್ರೆಯವರಲ್ಲಿ ಜನಪರವಾಗಿ ಸಾಮಾಜಿಕ ಕಾಳಜಿಯನ್ನು ಸಾಮಾಜಿಕ ವಿಷಮಯತೆಯನ್ನು ಅವರ ಅನ್ನಾವತಾರ, ಪುಟ್ಟ ವಿಧವೆ ಮುಂತಾದ ಕವನಗಳಲ್ಲಿ ಕಾಣುತ್ತೇವೆ. ಸಾಮಾಜಿಕ ಅಸಮಾನತೆ, ಬಡತನ, ಶೋಷಣೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿಹಿಡಿದಿವೆ.

ಸ್ವಾತಂತ್ರ್ಯಪೂರ್ವ ನವೋದಯ ಕಾವ್ಯ ಸಂದರ್ಭದಲ್ಲಿ ಸಕಾರಣವಾಗಿ ಅಭಿವ್ಯಕ್ತಿಗೊಂಡ ಆದರ್ಶಪರತೆ ಇತ್ಯಾದಿಗಳು ಸ್ವಾತಂತ್ರ್ಯೋತ್ತರದ ಸಂದರ್ಭಕ್ಕೆ ಅಪ್ರಸ್ತುತತೆ ಎಂಬಂತೆ ಕಂಡು ಬಂದದ್ದು ಕಾವ್ಯ ಮನೋಧರ್ಮದ ಮುಖ್ಯ ಬದಲಾವಣೆಗೆ ಕಾವ್ಯಾಭಿವ್ಯಕ್ತಿಯಲ್ಲಿ ಮಣ್ಣಿನ ವಾಸನೆಯ ಜೀವಂತಿಕೆಯ ಕಳಕಳಿ ಕಂಡು ಬಂದಿತು. ವ್ಯಕ್ತಿ ನಿರ್ಮಿತ ಪ್ರಭುತ್ವಕ್ಕೆ ಬದ್ಧವಾಗದೇ ತಾನು ತನ್ನೊಳಗನ್ನು ಹೊರಗನ್ನು ಮುಖಾಮುಖಿ ಮಾಡಿಕೊಳ್ಳುವ ಅಸ್ತಿತ್ವವಾದಿ ಮನೋಧರ್ಮ ಮತ್ತು ಬದುಕಿಗೆ ಅಗತ್ಯವಾದ ವಿಮರ್ಶಕ ಪ್ರಜ್ಞೆಯು ಬೆಳೆಯತೊಡಗಿತು.

'ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ
ಯುಗ ಯುಗದ ದಾರಿದ್ರ್ಯಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ ಏಳಿರೈ ಏಳಿ
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ..(ಕುವೆಂಪು)

ಶತಮಾನಗಳಿಂದ ಜಾತಿ ತಾರತಮ್ಯ, ಬಡತನದ ಬೇಗೆಯಲ್ಲಿ ಬೆಂದು ನೊಂದ ಜನಕೆ ಎಚ್ಚರಿಕೆಯ ಕರೆ ಕೊಟ್ಟ ಕವಿಗೆ ಸಮ ಸಮಾಜದ ಕನಸುಗಳನ್ನು ನನಸಾಗಿಸುವ ಛಲವಿದೆ. ಎಲ್ಲರೊಡಗೂಡಿ ಸಮಾನವಾಗಿ ತಲೆಯತ್ತಿ ಬಾಳುವಂತಾಗಬೇಕೆಂಬ ಕರೆಯನ್ನು ನೀಡಲಾಗಿದೆ. ಅರಿವು ಮತ್ತು ಎಚ್ಚರದ ಹೋರಾಟವು ಬಡತನ, ಜಾತಿ ವ್ಯವಸ್ಥೆ ಸಾಮಾಜಿಕ ರಚನೆಯ ವಿರುದ್ಧ ಧ್ವನಿ ಎತ್ತುವ ಅಗತ್ಯದ ಬಗ್ಗೆ ಕವಿತೆ ಮಾತಾಡುತ್ತದೆ. ಜಾತಿ, ಮತ, ಧರ್ಮಗಳ ಹೆಸರಿನಲ್ಲಿ ನಡೆಯುವ ಸಂಪ್ರದಾಯದ ಆಚರಣೆಗಳಿಗೆ ಮಾನಸಿಕವಾಗಿ ದಾಸರಾಗದೇ ಬಡತನದಲ್ಲಿಯೇ ನರಳದೇ, ಶ್ರಮಜೀವಿಗಳೆಲ್ಲರೂ ಒಗ್ಗೂಡಿ ಸಾಮಾಜಿಕ ಅನ್ಯಾಯವನ್ನು ಎದುರಿಸಲು ಸಜ್ಜಾಗುವಂತೆ ಕವಿ ಕರೆ ಕೊಡುತ್ತವೆ.

'ಕಟ್ಟುವೆವು ನಾವು ಹೊಸ ನಾಡೊಂದನ್ನು
ರಸದ ಬೀಡೊಂದನು
ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ
ಹರೆಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ
ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು..!

ಎಂ. ಗೋಪಾಲಕೃಷ್ಣ ಅಡಿಗರ ಕವಿತೆಯು ಅಂದಿಗೂ ಸ್ವಾತಂತ್ರ ಪ್ರೇಮಿಗಳಿಗೆ ಪ್ರೇರಣೆಯನ್ನೊದಗಿಸುವ ಕವಿತೆಯಾಗಿ ಅಡಿಗರ ಕವಿತೆಗಳಲ್ಲಿ ವಿಭಿನ್ನ ಕಾವ್ಯ ಶೈಲಿ ವಿಸ್ತಾರವಾದ ವಸ್ತುವಿಷಯಗಳು ನವ್ಯತೆಯ ಸ್ಪರ್ಶದಿಂದ ಪ್ರಸಿದ್ಧಿಯಾಗಿವೆ. ಕಾವ್ಯ ಗಾಂಭೀರ್ಯತೆ, ಸಾಮಾಜಿಕ ಬದ್ಧತೆ, ವೈಚಾರಿಕ ಚಿಂತನೆಯ ಅಂಶಗಳನ್ನು ಕಾಣುತ್ತೇವೆ. ಅಡಿಗರ ಕಾವ್ಯ ಹಾದಿ ಹೊರಳು ಹಾದಿಯ ವಿಶಿಷ್ಟ ಕಥನವು ಹೌದು. ಬಹುತ್ವ ಸಂಸ್ಕೃತಿಗೆ ಕೊಳ್ಳೆಯಿಡುತ್ತ ದೇಶವನ್ನು ಸಾಂಸ್ಕೃತಿಕ ವಿಘಟನೆಗೊಳಿಸುವ ಶಕ್ತಿಯ ಎದುರಿಸುವ ಅಂತಃಶಕ್ತಿ ಮತ್ತು ಸತ್ವದಂತೆ ಸಕಾಲಿಕ ಕವಿತೆಯನ್ನು ಬರೆದು ಜನರಲ್ಲಿ ಸಹ ಜೀವನದ ಮಹತ್ವವನ್ನು ಅಭಿವ್ಯಕ್ತಿಸಿದರು.

ಸಾಮಾಜಿಕ ಚಿಂತಕರು ಜಗತ್ತಿನ ಎಲ್ಲೆಡೆ ಶ್ರಮಜೀವಿಗಳಿಗೆ ತಮ್ಮ ಬಡತನಕ್ಕೆ ಮೂಲ ಕಾರಣಗಳ ಮತ್ತು ಹಕ್ಕಿನ ಬಗೆಗೆ ಅರಿವು ಮೂಡಿಸುವ ಮೂಲಕ ತಮ್ಮ ದುಡಿಮೆಯ ಉತ್ಪನ್ನವನ್ನು ದೋಚುತ್ತಿರುವ ವ್ಯಕ್ತಿಗಳನ್ನು ಸದೆಬಡಿದು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳುವಂತೆ ಕ್ರಾಂತಿಕಾರಕ ವಿಚಾರಗಳನ್ನು ಬಡಜನತೆಯ ಮನದಲ್ಲಿ ಕವಿತೆಯ ಮೂಲಕ ಬಿತ್ತಿದರು.

ಎಲ್ಲೊ ಹುಡುಕಿದೆ ಇಲ್ಲದ ದೇವರು
ಕಲ್ಲು ಮುಳ್ಳುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹವ
ಗುರುತಿಸುವುದಾದೇನು ನಮ್ಮೊಳಗೆ

ದೇವರನ್ನ ಹುಡುಕಿ ಅರಸಿ ಕಾಡುಮೇಡು ಅಲೆಯಬೇಕಿಲ್ಲ. ನಮ್ಮೊಳಗಿನ ಪ್ರೀತಿ ವಿಶ್ವಾಸದಲ್ಲೂ ದೇವರನ್ನು ಕಾಣಲು ಸಾಧ್ಯವೆಂಬ ಮನುಷತ್ವದ, ಮಮತೆಯ, ವಾತ್ಸಲ್ಯದಲ್ಲಿ ಗುರುತಿಸಲು ಸೋಲುತ್ತಿರುವ ಎಚ್ಚರಿಕೆಯ ಪ್ರಜ್ಞೆಯ ಮೂಲಕ ನಮ್ಮೊಳಗನ್ನು ಹುಡುಕಿಕೊಂಡಾಗ ನಿಜ ಮನುಷ್ಯ ದೊರೆಯಲು ಸಾಧ್ಯವೆಂಬ ಆಶಯ ವ್ಯಕ್ತವಾಗುತ್ತದೆ. ದೇವರು ಧರ್ಮಗಳ ಹೆಸರಲ್ಲಿ ಕಚ್ಚಾಡುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇಂಥ ಕವಿತೆಗಳು ಸಹಬಾಳ್ವೆಯ ಕನಸನ್ನು ಮತ್ತಷ್ಟು ಪುಷ್ಟಿಗೊಳಿಸುತ್ತವೆ.

ಸಾಮಾಜಿಕ ವ್ಯವಸ್ಥೆಯಲ್ಲಿರುವವರಲ್ಲಿ ಮೇಲು–ಕೀಳು, ಉಚ್ಚ–ನೀಚ, ಶ್ರೇಷ್ಠ–ಕನಿಷ್ಟ, ಸವರ್ಣೀಯ–ಅಸ್ಪೃಶ್ಯ ಎನ್ನುವ ತರತಮ ಭಾವವನ್ನು ತೊರೆಯುವುದೇ ಸರ್ವೋದಯದ ಮೂಲ ತಿರುಳಾಗಿದೆ. ದುಡಿಮೆಯಲ್ಲಿ ದೇವರನ್ನು ಕಾಣುವುದನ್ನು ಗಾಂಧೀಜಿಯವರು ಬದುಕಿನ ಭಾಗವಾಗಿಸಿಕೊಂಡಿದ್ದರು. ಸರ್ವೋದಯದ ಸೈದ್ಧಾಂತಿಕ ತಿರುಳು ಸಹ ಇದೇ ಆಗಿದೆ.

ಧರ್ಮಾಂಧತೆ, ಅಸಹಿಷ್ಣುತೆ ನಾಶವಾಗಿ ಪರಸ್ಪರ ಸಹಿಷ್ಣುತೆಯಿಂದ ಸಹಬಾಳ್ವೆಯನ್ನು ಸಹಕಾರದಿಂದ ನಡೆಸಿದಾಗ ಸರ್ವೋದಯ ಸಮಾಜ ನಿರ್ಮಾಣವಾಗಲು ಸಾಧ್ಯವೆಂದು ಗಾಂಧೀಜಿಯವರು ಮನಗಂಡಿದ್ದರು. ಗಾಂಧೀಜಿಯ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸರ್ವೋದಯ ತತ್ವವನ್ನು ಗ್ರಹಿಸಿರುವ ತೀ.ನಂ.ಶ್ರೀಕಂಠಯ್ಯನವರು ಸರ್ವೋದಯ ಸೂತ್ರದಾರ ಗಾಂಧಿ ಎಂದು ಕರೆದಿದ್ದಾರೆ.

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೆ ಬೇರೊತ್ತಿದರೂ
ಬೀಗಿ ಪರಕೀಯನಾಗಿ ತಲೆಯೆತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ (ಕೆ.ಎಸ್.ನಿಸ್ಸಾರ ಅಹಮ್ಮದ್)

ವೈಯಕ್ತಿಕ ಗುರುತಿನೊಂದಿಗೆ ಸಹಬಾಳ್ವೆಯ ಅನಿವಾರ್ಯತೆಯ ನಡುವೆ ನಡೆವ ಸಂಕೀರ್ಣ ಸೆಣಸಾಟ ಮೇಲ್ನೋಟಕ್ಕೆ ಕಂಡರು ಆಳದಲ್ಲಿ ಎಲ್ಲರೊಂದಿಗೆ ಹೊಂದಿಕೆಯ ಬದುಕಿನ ಆಶಯವನ್ನು ಅನಾವರಣಗೊಳಿಸುತ್ತದೆ. ಬಹುಸಂಸ್ಕೃತಿಗಳಲ್ಲಿ ಅಲ್ಪಸಂಖ್ಯಾತರ ಅಸ್ಮಿತೆಯ ಹುಡುಕಾಟ, ತೊಳಲಾಟಗಳನ್ನು ಕಟ್ಟಿಕೊಟ್ಟಿದ್ದಾರೆ.  ಭೌತಿಕ ಮತ್ತು ಸಾಮಾಜಿಕ ಸಂರಚನೆಯಲ್ಲಿ ಸಹಬಾಳ್ವೆಯ ಅನಿವಾರ್ಯತೆಯನ್ನು, ತಾತ್ವಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳನ್ನು ಹೊಂದಿದ್ದರೂ ಪ್ರಜ್ಞಾಪೂರ್ವಕ ಹಕ್ಕೊತ್ತಾಯವನ್ನು ಕವಿ ಮುಂದಿಡುತ್ತಾನೆ.

ದಲಿತ ಬಂಡಾಯ ಚಳವಳಿ ಶತಮಾನಗಳಿಂದ ತುಳಿತಕ್ಕೊಳಗಾದವರ ದನಿಯಾದುದರಿಂದ ಸಮಾಜದ ಆಶಯ, ಸಹಬಾಳ್ವೆಯ ನಿಲುವುಗಳು, ಮನುಷ್ಯರನ್ನು ಮನುಷ್ಯರಾಗಿ ನಡೆಸಿಕೊಳ್ಳಲು ನಿರಾಕರಿಸಿದ ವ್ಯವಸ್ಥೆಯ ಕುರಿತು ವಿರೋಧಿಸುವ ನಿಲುವುಗಳು ಕಂಡು ಬರುತ್ತವೆ.

ನಿನ್ನ ಚರಿತ್ರೆಯ
ಪುಟಗಳಿಗೆ ಬೆಂಕಿಯಿಡುವೆ
ನನ್ನೊಡಲ ನೆತ್ತರಿಂದ ಹೊಸ ಚರಿತ್ರೆ ಬರೆಯುವೆ
ನಿನಗೆ ಧಿಕ್ಕಾರ, ನಿನ್ನ ವ್ಯವಸ್ಥೆಗೆ ಧಿಕ್ಕಾರ
ನಿನ್ನ ಪರಂಪರೆ ಪುರಾಣಗಳಿಗೆ ಧಿಕ್ಕಾರ
ಧಿಕ್ಕಾರ, ಧಿಕ್ಕಾರ (ಇಂಡಿಯವ್ವ ಮತ್ತು ದಲಿತ– ಇಂದೂಧರ ಹೊನ್ನಾಪುರ)

ಯಾವ ಪರಂಪರೆ ಮನುಷ್ಯನನ್ನು ಮನುಷ್ಯನಾಗಿ ನೋಡದೆ ಇರುವ ವ್ಯವಸ್ಥೆಯ ಬಗ್ಗೆ ನಿರಾಕರಣೆ ಸಹಜವಾದದ್ದಾಗಿದೆ. ಗಾಂಧೀಜಿಯವರ ದಲಿತೋದ್ಧಾರದ ನಿಲುವುಗಳು, ಅಂಬೇಡ್ಕರರ ದಲಿತರಲ್ಲಿ ಆತ್ಮಗೌರವ; ಹೋರಾಟದ ವಿಚಾರಧಾರೆಗಳನ್ನು ತುಳಿತಕ್ಕೊಳಗಾದ ಸಾಮಾಜಿಕ ಸ್ತರವೊಂದು ತನ್ನ ಅನುಭವಗಳನ್ನು ತನ್ನದೇ ಭಾಷೆಯಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಯಿತು.

ಧರ್ಮ ಸಹಿಷ್ಣುತೆಯು ಗಾಂಧೀಜಿಯವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಗಾಂಧೀಜಿಯವರ ಪ್ರಕಾರ ಧರ್ಮವೆಂದರೆ ಆತ್ಮಸಾಕ್ಷಾತ್ಕಾರ, ಆತ್ಮಜ್ಞಾನ ಸರ್ವಧರ್ಮ ಸಹಿಷ್ಣುತಾಭಾವವು ಏಕತೆಯನ್ನು ಬೆಳಸಬಲ್ಲದು. ಮನುಷ್ಯನ ಅಗತ್ಯಗಳನ್ನು ಪೂರೈಸಲು ಭೂಮಿ ಸಾಕಷ್ಟು ಅವಕಾಶ ಒದಗಿಸಿದೆ. ಗಾಂಧೀಜಿಯವರ ಕನಸಿನ ಸರ್ವೋದಯ ಸಮಾಜದಲ್ಲಿ ಮನುಷ್ಯ ದುರಾಸೆ ಮುಕ್ತರಾಗಿರುತ್ತಾರೆ. ಸರಳ ಜೀವನಕ್ಕೆ ಹೆಚ್ಚಿನ ಮಹತ್ವವನ್ನು ಹೊಂದಿದ್ದರೂ ಸರ್ವೋದಯ ಚಳುವಳಿ ಕುಟುಂಬ, ಸಮಾಜ, ಜಾತಿ, ಧರ್ಮ, ಭಾಷೆ, ಜನಾಂಗಗಳ ಆಧಾರಗಳ ಮೇಲೆ ಇರುವ ವ್ಯತ್ಯಾಸಗಳನ್ನು ತೆಗೆದು ಹಾಕಲಾಗುವುದು.

ಸರ್ವೋದಯ ಸಮಾಜವು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಆಧರಿಸಿದೆ. ಅಲ್ಲಿ ಶೋಷಣೆ ಮತ್ತು ವರ್ಗ ದ್ವೇಷಕ್ಕೆ ಅವಕಾಶವಿಲ್ಲ. ಶೋಷಣೆಯ ಸಾಧನ ಮತ್ತು ಸಾಮಾಜಿಕ ಭಿನ್ನತೆಗಳು ಇರುವುದಿಲ್ಲ. ಸರ್ವೋದಯ ಎಲ್ಲರ ಪ್ರಗತಿಯನ್ನು ಪ್ರತಿನಿಧಿಸುತ್ತದೆ. ಸರ್ವೋದಯವು ಸಾಮಾನ್ಯರ ಕಲ್ಯಾಣವನ್ನು ಬಯಸುವಂತಹುದು. ಸರ್ವಧರ್ಮ ಸಮನ್ವಯ ಎಂಬ ಪರಿಕಲ್ಪನೆಯು ಭಾರತದ ವಿವಿಧ

ಧರ್ಮಗಳ ಸಹಬಾಳ್ವೆಯನ್ನು ಪ್ರೋತ್ಸಾಹಿಸುತ್ತದೆ. ಯಾವುದೇ ಒಂದು ಧರ್ಮಕ್ಕೆ ಪ್ರತ್ಯೇಕ ಮನ್ನಣೆ ನೀಡದೇ ಎಲ್ಲಾ ಧರ್ಮಿಯ ಒಟ್ಟಾಗಿ ಬದುಕಬೇಕೆಂಬ ತತ್ವವನ್ನು ಪ್ರತಿಪಾದಿಸುತ್ತಾರೆ.

ಮನುಷ್ಯ ಕುಲಂ ತಾನೊಂದು ವಲಂ ಎಂದ ಆದಿ ಕವಿ ಪಂಪನಿಂದ ಹಿಡಿದು ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೆಕಟ್ಟುತ್ತೇವ ಎನ್ನುವ ಸತೀಶ ಕುಲಕರ್ಣಿಯವರ ಕವಿತೆಯವರೆಗೆ ಕಾವ್ಯ ಪರಂಪರೆಯಲ್ಲಿ ಮಾನವೀಯತೆ ಹಾಗೂ ಸಮಾನತೆ ಸಹಬಾಳ್ವೆಯ ಪ್ರತಿಪಾದನೆಯನ್ನು ಕಾಣುತ್ತೇವೆ. ತರತಮ ರಹಿತ ಸಮಾಜದ ನಿರ್ಮಾಣ, ಅಸಮಾನತೆಯ ಬಗೆಗಿನ ಆಕ್ರೋಶ, ಕಾವ್ಯದ ಕಾಳಜಿಯ ಮೂಲದ್ರವ್ಯವಾಗಿದೆ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಬೆಟ್ಟದಡಿ ಹುಲ್ಲಾದರೆ ದನಕರುಗಳಿಗೆ ಆಹಾರವಾಗುವ ಅವಕಾಶ, ಮನೆಗೆ ಕೀರ್ತಿ ಹರಡುವ ಕ್ರಮ, ಕಷ್ಟಗಳನ್ನು ಎದುರಿಸಿ ದೇಹ ಗಟ್ಟಿಯಾಗಬೇಕು. ಬಡವರ ಪಾಲಿಗೆ ಆಶಾಕಿರಣವಾದರೆ ಎಲ್ಲರೊಳಗೊಂದಾಗುವ, ವಿಶ್ವಭ್ರಾತೃತ್ವ ಬೆಳೆಸಲು ಸಾಧ್ಯವಾಗುತ್ತದೆ. ಹುಲ್ಲು ಬೆಟ್ಟದಡಿ ಬೆಳೆದರೆ ಮೇಲಿನ ಬಂಡೆಕಲ್ಲು ಜಾರುವುದನ್ನು ತಪ್ಪಿಸಿದಂತೆ ಕಲ್ಲುಗಳೆಡೆಯಲ್ಲಿ ಬೆಳೆಯುವ ಹುಲ್ಲು ಘನವಾದದ್ದನ್ನು ಹಿಡಿದು ನಿಲ್ಲಿಸುವ ಶಕ್ತಿಹೊಂದಿದೆ. ಯಾವುದನ್ನು ತೃಣವೆಂದು ತಿರಸ್ಕರಿಸಬಾರದೆಂಬ ಸಮಾನತೆಯನ್ನು ಬದುಕಿನ ಮೌಲ್ಯವನ್ನು ತಿಳಿಸುತ್ತದೆ. ಆಧುನಿಕ ಕನ್ನಡದ ಸಂದರ್ಭದಲ್ಲಿ ಅನೇಕ ಕವಿಗಳು ಸಹಬಾಳ್ವೆಯ ಪ್ರಜ್ಞೆಯ ನೆಲೆಯಲ್ಲಿ ಹಲವಾರು ಕವಿತೆಗಳನ್ನು ಕಟ್ಟಿಕೊಟ್ಟಿದ್ದಾರೆ. ಹಾಗೂ ಸಹಬಾಳ್ವೆ, ಸಮಾನತೆ, ಸಹಿಷ್ಣುತೆ, ಸರ್ವೋದಯದ ಆಶಯಗಳು ಹುಲುಸಾದ ಫಸಲು ಕನ್ನಡ ಕಾವ್ಯಲೋಕಕ್ಕಿದೆ. ವರ್ತಮಾನದ ಬದುಕಿನಲ್ಲಿ ಅಗತ್ಯವಿರುವ ಈ ಮೌಲ್ಯಗಳು ಅನುಸರಣೆಯ ಮೌಲ್ಯಗಳಾದಾಗ ಮಾತ್ರ ಬದುಕು ಹಸನುಗೊಳ್ಳಲು ಸಾಧ್ಯವೆಂಬ ಸತ್ಯದರ್ಶನದ ಮೂಲಕ ಕನ್ನಡ ಕಾವ್ಯಗಳು ಎಚ್ಚರಿಕೆಯ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತವೆ.

**ಆಕರ ಗ್ರಂಥಗಳು**

1. ಕುವೆಂಪು ಸಮಗ್ರ ಕಾವ್ಯ ಸಂ: ಡಾ. ಕೆ.ಸಿ.ರೆಡ್ಡಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
2. ಕುವೆಂಪು ಕುರಿತ ಚಿಂತನೆಗಳು ಲೇ: ಪ್ರೋ. ಹಂಪ ನಾಗರಾಜಯ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು
3. ಬೇಂದ್ರ ಕಾವ್ಯ ಜೀವಕೋಶ ಲೇ: ಬಿ.ಬಿ.ರಾಜಪುರೋಹಿತ, ರವೀಂದ್ರ ಪುಸ್ತಕಾಲಯ